ಅಂತ ಒಳಗಡಿಯಿರಿಸಿದ ಸೋಮಯ್ಯ. ಆತನನ್ನು ನೋಡುತ್ತಲೇ, ವರ್ಷಿಣಿಯ ಮೊಗ ಗಂಟಿಕ್ಕಿತು.

"ನಿಮ್ಗೆ ಕಾಯದೆ ನಮ್ ಕೆಲ್ಸ ಮುಂದುವರೆಸಿದೀವಿ, ಸೋಮಯ್ಯನವರೆ... ಮೇಡಮ್, ನಾನೊಮ್ಮೆ ಮೋಹಿತನ ಕೋಣೆ ತಪಾಸಣೆ ಮಾಡಲೇ?"

"ನಿಮ್ಮ ಬಳಿ ವಾರಂಟ್ ಇದೆಯೆ?"

"ಓಹ್, ನಾನು ಈಗ್ಲೇ ಪೊಲೀಸ್ ಕಮಿಷನರಿಗೆ ಫೋನು ಮಾಡಿ, ನ್ಯಾಯಾಲಯದಿಂದ ತರುವ ಏರ್ಪಾಡು ಮಾಡಲೇ?"

ಕಮಿಷನರ್ ಹೆಸರು ಹೇಳುತ್ತಿದ್ದಂತೆ ಆಕೆಯ ಮೋರೆ ವಿವರ್ಣವಾಯ್ತು. ಮರು ಮಾತಾಡದೆ ಆಕೆ ಚಿಕ್ಕನಂಜಪ್ಪನನ್ನು ಕರೆದು, ಮೋಹಿತನ ಕೊಠಡಿ ತೋರಿಸಲು ಸೂಚಿಸಿ, ಏರು ದನಿಯಲ್ಲಿ ನುಡಿದಳು,

"ಏನು ಬೇಕಾದ್ರೂ ನೋಡ್ಕೊಳ್ಳಿ. ನನ್ನನ್ನ ಮಾತ್ರ ಏನೂ ಕೇಳ್ಬೇಡಿ."

ಚಿಕ್ಕನಂಜಪ್ಪ ನಮ್ಮನ್ನು ಮಹಡಿಯಲ್ಲಿರುವ ಮೋಹಿತನ ಕೋಣೆಗೆ ಕರೆತಂದ.

ಸುಮಾರು ನಾಲ್ಕು ನೂರು ಚದರ ಅಡಿ ವಿಸ್ತಾರದ ಕೊಠಡಿ. ಬಾಗಿಲಿಗೆ ಎದುರಾಗಿದ್ದ ವಿಶಾಲ ಕಿಟಕಿಯಿಂದ ಹೊರಗಿನ ಅರಣ್ಯದ ರಮಣೀಯ ದೃಶ್ಯ ಕಾಣುತ್ತಿತ್ತು. ಚೆಲ್ಲಾಪಿಲ್ಲಿಯಾದ ವಸ್ತುಗಳಿಂದ ತುಂಬಿದ ಮೇಜು, ಲಾಪ್ ಟಾಪ್, ಮರದ ಭಾರವಾದ ಕುರ್ಚಿಗಳು, ಪುಸ್ತಕಗಳಿಂದ ತುಂಬಿದ ಗಾಜಿನ ಬಾಗಿಲು ಹೊಂದಿದ ಉಕ್ಕಿನ ಕಪಾಟುಗಳು, ಷೆಲ್ಫಿನಲ್ಲಿ ತುಂಬಿಸಿಟ್ಟ ಯಾವುದೋ ಭಾಷೆಯ ಪತ್ರಿಕೆಗಳು...

"ಇದು ಯಾವ ಭಾಷೆಯ ಪತ್ರಿಕೆ?"

ನಾನು ಕರಮಚಂದನತ್ತ ನೋಡುತ್ತಾ ಕೇಳಿದೆ. ಆತ ಯಾವುದೋ ಗಹನವಾದ ಆಲೋಚನೆಯಲ್ಲಿ ಮುಳುಗಿದ್ದ.

"ಅದು ಗುಜರಾತಿ ಭಾಷೆಯ ಪತ್ರಿಕೆ... ಗುಜರಾತ್ ಸಮಾಚಾರ್."

ನನ್ನ ಪ್ರಶ್ನೆಗೆ ಸೋಮಯ್ಯ ಉತ್ತರಿಸಿದ.

"ನಿಮ್ಗೆ ಗುಜರಾತಿ ಬರುತ್ತದೆಯೆ?"

"ಇಲ್ಲ. ಆದ್ರೆ ಗುಜರಾತಿ ಅಕ್ಷರ ಗುರುತಿಸಬಲ್ಲೆ ಅಷ್ಟೆ! ಕೆಳಗಡೆ ಸಣ್ಣ ಅಕ್ಷರದಲ್ಲಿ ಆಂಗ್ಲ ಭಾಷೆಯಲ್ಲಿದೆ ಅದ್ರ ಹೆಸರಿದೆ, ನೋಡಿ. "

"ಆದ್ರೆ ಮೋಹಿತ್ ಯಾಕೆ ಗುಜರಾತಿ ಪತ್ರಿಕೆ ತರಿಸುತ್ತಿದ್ದಾರೆ?"

ನಾನು ಕರಮಚಂದನನ್ನು ಉದ್ದೇಶಿಸಿ ಕೇಳಿದೆ. ಆತ ಆಗಲೇ ಪತ್ರಿಕೆಯಲ್ಲಿ ಆಳವಾಗಿ ಕಣ್ಣಾಡಿಸುತ್ತಿದ್ದ. ಅವನಿಗೆ ಭಾರತದ ಅನೇಕ ಭಾಷೆಗಳಲ್ಲಿ ಓದುವ, ಬರೆಯುವ ಸಾಮರ್ಥ್ಯವಿದ್ದುದು ನನಗೆ ತಿಳಿದಿತ್ತು. ನನ್ನ ಮಾತಿಗೆ ಆತ ಪ್ರತಿಕ್ರಿಯಿಸಲಿಲ್ಲ. ಸುಮಾರು ಅರ್ಧ ತಾಸು ಪತ್ರಿಕೆಗಳ ರಾಶಿಯಲ್ಲಿ ಕಣ್ಣೋಡಿಸಿದ ನಂತರ ಕರಮಚಂದ ಮೇಜಿನ ಮೇಲಿದ್ದ ಲ್ಯಾಪ್ ಟಾಪ್ ಚಾಲೂ ಮಾಡಿದ. ಅದರಲ್ಲಿ ತದೇಕಚಿತ್ತದಿಂದ ದೃಷ್ಟಿ ಹೂಡಿದಾಗ, ಆತನ ಹುಬ್ಬುಗಳು ಅಚ್ಚರಿಯಲ್ಲಿ ಮೇಲೇರಿದವು. ಮೇಜಿನ ಸೆಳೆಖಾನೆಯಲ್ಲಿ ಕೆಲವು ಪ್ರಮಾಣಪತ್ರಗಳು, ಬಯೋಡಾಟಗಳಿದ್ದವು. ನಂತರ ಆತನ ಗಮನ ಸೆಳೆದಿದ್ದು ಮೋಹಿತನ ಈ ಸಾಲಿನ ಡೈರಿ. ಅದರಲ್ಲಿ ಕೆಲವು ಪುಟಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ 'ಎನ್ ಡಿ' ಎಂದು ಗೀಚಿಕೊಂಡಿತ್ತು. ಮೇ ತಿಂಗಳ ನಂತರ ಅಂತಹ ಬರಹಗಳಿರಲಿಲ್ಲ. ಆದ್ರೆ ಮೇ ಮೂರರಂದು ಗುಜರಾತಿ ಭಾಷೆಯಲ್ಲಿ